# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ನೇಪಾಳದಲ್ಲಿ ಭೂಕಂಪದಿಂದ ಸಂತ್ರಸ್ತರಾದವರಿಗೆ ಮೂಲಭೂತ ಅಗತ್ಯ ಸಾಮಗ್ರಿಗಳನ್ನು ವಿತರಿಸುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ.


ಸಂಪುಟ : 36 ಸಂಚಿಕೆ : 19 ಮನ್ಮಥ–ಮೇಷ ಕಲಿಯುಗಾಬ್ದ 5117 15–5–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಮಳೆಗಾಲದ ಸ್ವಾಗತಕೆ ಹೀಗಿರಲಿ ಸಿದ್ಧತೆ



ಮಳೆಗಾಲ ಸಮೀಪಿಸುತ್ತಿದೆ ಎನ್ನುವ ಸುದ್ದಿ ಆತಂಕ, ಸಂತಸ ಹಾಗೂ ಹಲವು ನಿರೀಕ್ಷೆಗಳನ್ನು ಸೃಷ್ಟಿಸುತ್ತದೆ. ಮಳೆ ಹೆಚ್ಚೋ ಕಡಿಮೆಯೋ, ಅಕಾಲಿಕವೋ ಏನೇ ಇದ್ದರೂ ಸೋರುತ್ತಿರುವ ಮನೆಯ ಮಾಡು ಸರಿಮಾಡಬೇಕು, ನೆಟ್ಟ ಗಿಡಗಳಿಗೆ ಗೊಬ್ಬರ ಕೊಡಬೇಕು, ಹಳೆಯ ಮನೆಯ ಮಾಡು ಈ ಮಳೆಗಾಲ ಬೀಳದೆ ಉಳಿದೀತೇ.... ಹಲವು ಆತಂಕಗಳು. ಹಸಿರುಕ್ಕಿಸುವ ಮಳೆಯ ಬಿಂದುಗಳನ್ನು ನೆನೆಯುವುದೇ ಒಂದು ರೀತಿಯಲ್ಲಿ ಸಂತಸ, ಖುಷಿ ತರುವಂಥದ್ದು. ಈ ಬಾರಿ ಯಾವ ಬೆಳೆ? ಬೀಜ ಎಲ್ಲಿಂದ ತರೋದು? ಮಾರುಕಟ್ಟೆ ಸುಲಭವಾದೀತೇ? ಬಂಡವಾಳ ಎಷ್ಟು? ನೆಲ ಹಸಿಯಾಗುವ ಹೊತ್ತಿನಲ್ಲಿ ಕೃಷಿಕರ ಮನಸ್ಸಿನಲ್ಲಿ ಸುಳಿದಾಡುವ ಪ್ರಶ್ನೆಗಳಿವು.

ಮಳೆ ತಾನು ಬಂದಿದ್ದೇನೆ ಎಂದು ಜಾಹೀರು ಮಾಡುತ್ತಲೇ ಕೃಷಿಕರನ್ನು ಹೊಲದೆಡೆ ಸೆಳೆದುಬಿಡುತ್ತದೆ. ವಾತಾವರಣವನ್ನು ತಂಪಾಗಿಸುವ ಮಳೆ ಮಣ್ಣನ್ನು ಬೆಚ್ಚಗೆ ಮಾಡಿಬಿಡುತ್ತದೆ! ಮಣ್ಣಿನೊಳಗಿನ ಅಸಂಖ್ಯ ಜೀವಸಂಕುಲಗಳನ್ನು 'ನಾನು ಬಂದೆ ಏಳಿ' ಎಂದೆಚ್ಚರಿಸಿ ಅವೆಲ್ಲವುಗಳನ್ನು ಕ್ರಿಯಾಶೀಲಗೊಳಿಸಿ ಮಣ್ಣಿನ ಕಾವೇರಿಸಿಬಿಡುತ್ತದೆ ಮಳೆ. ಅದೆಷ್ಟೋ ಕಾಲದಿಂದ ಯಾರ ಕಣ್ಣಿಗೂ ಬೀಳದೆ ಮಣ್ಣಿನಲ್ಲಿ ಅವಿತು ಕೂತ ಪುಟ್ಟ ಬೀಜದೊಳಗೆ ಹಿಗ್ಗುವ ಆಸೆ, ಚಿಗುರುವ ತವಕ. ಕತ್ತಲೆಯಿಂದ ಬೆಳಕಿನೆಡೆಗೆ ಅಸಂಖ್ಯ ಜೀವಸತ್ವಗಳನ್ನು ನೆಲದ ಮೇಲೆಳೆದು ತರುವ ಪುಟ್ಟ ನೀರಬಿಂದುಗಳ ಸಾಮರ್ಥ್ಯವನ್ನೊಮ್ಮೆ ನೆನೆದರೆ ಅಬ್ಬಾ ಎನಿಸುತ್ತದೆ. ಮಳೆಯ ಸ್ಪರ್ಶದಲ್ಲಿ ಮೀಯುವ ನೆಲ ರಾತ್ರೋರಾತ್ರಿ ಹಸಿರ ಹೆತ್ತು ತಾನು ತಾಯಿ ಎಂದು ಸಾರಿಬಿಡುವಂತೆ ಭಾಸವಾಗುತ್ತದೆ.

ಪುಟ್ಟ ಜೀವವಾದ ಬೀಜಕ್ಕೆ ತಾನು ಬೆಳೆಯಬೇಕು, ಹಸಿರಾಗಬೇಕು, ಬೆಳಕಿನೆಡೆ ಸಾಗಬೇಕು, ಜೊತೆಗೆ ಬೆಳಕೂ ಆಗಬೇಕು ಎಂಬ ಹಂಬಲವಿರುವಾಗ ದೊಡ್ಡ ಜೀವಿಗಳಾದ ನಮ್ಮಲ್ಲಿ ಮಳೆಗಾಲಕ್ಕೊಂದು ಯೋಜನೆ ಇಲ್ಲದಿದ್ದರೆ ಹೇಗೆ! ಈ ಬಾರಿಯ ಮಳೆಗಾಲದ ಯೋಜನೆಗಳು ಹೀಗಿರಲಿ, ಅಲ್ಲವೇ?

- ಮನೆಯ ಮೇಲೆ ಬೀಳುವ ಮಳೆ ನೀರನ್ನು ಮನೆಯ ಅಂಗಳದಲ್ಲೇ ಕೂಡಿಡುವ ಪ್ರಯತ್ನ ಮಾಡೋಣ. ನೀರಿಂಗಿಸಲು ಇಂಗು ಗುಂಡಿಗಳನ್ನು ಮಾಡೋಣ.
- ನಮ್ಮ ಹೊಲಗಳಲ್ಲಿ ಬೀಳುವ ಮಳೆಯ ನೀರನ್ನು ತೆರೆದ ಬಾವಿ ಮತ್ತು ಕೊಳವೆ ಬಾವಿಗಳ ಅಂತರ್ಜಲ ಹೆಚ್ಚಿಸಿಕೊಳ್ಳುವಲ್ಲಿ ಜಾಣತನದಿಂದ ಬಳಸಿಕೊಳ್ಳೋಣ.
- ನೀರು ರಭಸವಾಗಿ ಹರಿಯದೇ, ಹೊಲದ ನಡುವೆ ನಿಧಾನವಾಗಿ ಓಡಾಡಿ ಹರಿಯುವಂತೆ ಕಾಲುವೆಗಳಿರಲಿ.
- ಮಳೆ ನೀರು ಹರಿಯುವ ಕಾಲುವೆಗಳಿಗೆ ಸಣ್ಣ ಸಣ್ಣ ತಡೆ ಒಡ್ಡಲು ಚೆಕ್ ಡ್ಯಾಮ್‌ನಂತಹ ರಚನೆ ಮಾಡಿದರೆ, ಕೆಲವೇ ವರ್ಷಗಳಲ್ಲಿ ಸುತ್ತಮುತ್ತಲಿನ ಬೋರ್‌ವೆಲ್‌ಗಳಲ್ಲಿ ನೀರು ಹೆಚ್ಚಿರುವುದು ಹಲವಾರು ಹಳ್ಳಿಗಳಲ್ಲಿ ಅನುಭವಕ್ಕೆ ಬಂದಿದೆ. ನಾವು ಹೀಗೆ ಮಾಡಬಹುದು.
- ನೀರು ಪೋಲಾಗದಂತೆ – ಮಲಿನವಾಗದಂತೆ ಎಲ್ಲಾ ಕಡೆಗಳಲ್ಲಿ ಎಚ್ಚರ ವಹಿಸೋಣ.
- ನೀರನ್ನು ಬಡವರ ತುಪ್ಪ ಎಂದು ಭಾವಿಸಿ ಬಳಸೋಣ.



### ಹಸಿರುಳಿಸೋಣ

- ನಿತ್ಯ ಹಸಿರಾಗಿರುವ ದೀರ್ಘಕಾಲ ಬಾಳುವ ಗಿಡಗಳನ್ನು ಮನೆಯ ಅಂಗಳ, ಹೊಲಗಳಲ್ಲಿ ಬೆಳೆಸೋಣ.
- ನಮ್ಮ ಹೊಲ ಗದ್ದೆಗಳಲ್ಲಿ ಮಂಗ, ಹಂದಿ ಮೊದಲಾದ ಕಾಡು ಪ್ರಾಣಿಗಳ ಕಾಟ ಎಂದು ಅಲವತ್ತುಕೊಳ್ಳುತ್ತಿರುವವರೇ ಹೆಚ್ಚು. ಕಾಡು ಕಡಿಮೆಯಾದರೆ, ಅವುಗಳು ಬದುಕುವುದಾದರೂ ಎಲ್ಲಿ? ತಿನ್ನುವುದಾದರೂ ಏನನ್ನು ಎನ್ನುವುದೂ ಸರಿಯಾದ ಪ್ರಶ್ನೆಯೇ! ಇದಕ್ಕೇನು ಉತ್ತರ?
- ಮಳೆಗಾಲದಲ್ಲಿ ನಮ್ಮ ಜಮೀನಿನ ಸಮೀಪದ ಖಾಲಿ ಜಾಗದಲ್ಲಿ, ಕಾಡಿನಂಚಿನಲ್ಲಿ ಪ್ರಾಣಿಗಳಿಗೆ ಆಹಾರವಾಗಬಹುದಾದ ಹಣ್ಣಿನ ಗಿಡಗಳನ್ನು ನೆಡಬಹುದೇ? ಪ್ರತಿ ಮಳೆಗಾಲದಲ್ಲಿ ಕನಿಷ್ಠ 10 ಗಿಡಗಳನ್ನು ನೆಡುವ ಸಂಕಲ್ಪ ಮಾಡಬಹುದೇ?


**ಸಾವಯವ ಕೃಷಿ ಪರಿವಾರ**

ಸಾವಯವ ಕೃಷಿ ಕುಟುಂಬಗಳ ಮಹಾಮಂಡಲ

**ಸಾವಯವ ಕೃಷಿಯ ಪ್ರಚಾರ ಮತ್ತು ಸಾವಯವ ಬೆಳೆಗಳ ಮಾರಾಟಕ್ಕೆ ಕೃಷಿಕರೇ ರೂಪಿಸಿರುವ ಸಾವಯವ ಕೃಷಿ ಪರಿವಾರ(ರಿ.) ಸಂಸ್ಥೆಯ ಸದಸ್ಯರಾಗೋಣ. ಹೆಚ್ಚಿನ ಮಾಹಿತಿಗಾಗಿ www.savayavakrishipariwar.org ವೆಬ್‌ಸೈಟ್‌ಗೆ ಭೇಟಿ ಕೊಡಿ.**

**ದೂರವಾಣಿ : 94482 04831**


### ದೇಶಿ ಕೃಷಿ ವಿಧಾನ – ಸಾವಯವ

- ನಮ್ಮ ಭಾಗದ ಯಾವುದಾದರೊಂದು ದೇಶೀ ಆಹಾರ ಬೆಳೆಯ (ಭತ್ತ, ರಾಗಿ, ಜೋಳ ಇತ್ಯಾದಿ) ತಳಿಯನ್ನು ಉಳಿಸಿ ಬೆಳೆಸೋಣ.
- ಪಂಚಾಂಗಗಳಲ್ಲಿ ಉಲ್ಲೇಖವಾಗಿರುವ ರೀತಿಗಳನ್ನು ಅನುಸರಿಸಿ ಬೀಜ–ಗಿಡಗಳನ್ನು ನೆಡೋಣ. ಇದರಿಂದ ಬೆಳೆಗಳು ಸಮೃದ್ಧವಾಗಿ ಬರುತ್ತವೆ ಎಂಬುದು ಹಲವರ ಅನುಭವ.
- ನಮ್ಮ ಭಾಗದ ವಿಶಿಷ್ಟ ಹಣ್ಣಿನ ತಳಿ, ವಿಶಿಷ್ಟ ವೃಕ್ಷ, ವಿಶಿಷ್ಟ ತರಕಾರಿ ಬೆಳೆ ನಮ್ಮ ಕೃಷಿ ಅಂಗಳದಲ್ಲೂ ಇದೆಯೇ ಎಂಬುದನ್ನು ಗಮನಿಸಿ ಜೋಡಿಸೋಣ.
- ಭೂಮಿತಾಯಿಗೆ ವಿಷ ಉಣಿಸದೆ ನಮ್ಮ ಭಾಗದ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನೇ (ಸಾವಯವ ಕೃಷಿ ಪದ್ಧತಿ) ಅನುಸರಿಸೋಣ.
- ಒಂದು ಕಾಲದಲ್ಲಿ ರಾಸಾಯನಿಕಗಳನ್ನು ಬಳಸಿ ದಾಖಲೆಯ ಗೋಧಿ ಇಳುವರಿ ತೆಗೆದ ಪಂಜಾಬಿನ ರೈತರ ಹೊಲಗಳು ಇಂದು ಬರಡಾಗಿವೆ. ಕೃಷಿಯನ್ನು ಬಿಟ್ಟು ಬೇರೆ ವೃತ್ತಿಗಳನ್ನು ಕೈಗೊಳ್ಳುವ ಅನಿವಾರ್ಯತೆ ಎದುರಾಗಿದೆ ಅವರಿಗೆ. ಇದನ್ನು ಅರ್ಥಮಾಡಿಕೊಂಡು ಸಾವಯವದತ್ತ ಮರಳುವುದು ಬುದ್ಧಿವಂತಿಕೆಯ ನಡೆಯಾದೀತು.
- ನಮ್ಮ ಇಡೀ ಜಮೀನನ್ನು ಒಂದೇ ಬಾರಿಗೆ ಸಾವಯವ ಕೃಷಿಗೆ ಪರಿವರ್ತಿಸಲು ಕಷ್ಟವೆನಿಸಿದರೆ, ಕೇವಲ ಅರ್ಧ ಎಕರೆ ಅಥವಾ ಒಂದು ಎಕರೆಯಲ್ಲಾದರೂ ಸಾವಯವ ಕೃಷಿ ಪ್ರಾರಂಭ ಮಾಡಬಹುದೇ?
- ಸಾವಯವ ಕೃಷಿಯಲ್ಲೇ ಬೆಳೆಗಳನ್ನು ಬೆಳೆಯುತ್ತಿರುವ ನಮ್ಮ ಭಾಗದ ಕೃಷಿಕರ ಕ್ಷೇತ್ರಕ್ಕೆ ಕುಟುಂಬ ಸಮೇತ ಭೇಟಿ ನೀಡೋಣ.
- ಮನೆಯಂಗಳದಲ್ಲಿ ಅಡುಗೆಮನೆಗೆ ಬೇಕಾಗುವ ಹಲವು ರೀತಿಯ ತರಕಾರಿಗಳನ್ನು ಬೆಳೆಯಬಹುದು. ಪಾತ್ರೆ ತೊಳೆದ ನೀರನ್ನು ತರಕಾರಿ ಬೆಳೆಯಲು ಮರುಬಳಸಬಹುದು. ತರಕಾರಿಯಲ್ಲಿ ನಾವೆಲ್ಲರೂ ಸ್ವಾವಲಂಬಿಗಳಾಗೋಣ.
- ನಾವು ಬೆಳೆಯದ ಬೆಳೆಗಳನ್ನು ಸಾವಯವ ಕೃಷಿಕರಿಂದಲೇ ಪಡೆಯೋಣ (ಖರೀದಿಸೋಣ). ನಮ್ಮ ಊಟದ ತಟ್ಟೆಯಲ್ಲಿ ಆಹಾರ ತರಕಾರಿಗಳ ಮೂಲಕ ವಿಷ ಬರದಂತೆ ಮಾಡೋಣ.
- ಸಾವಯವ ಕೃಷಿಗೆ ಸಂಬಂಧಿಸಿದ ಪುಸ್ತಕಗಳನ್ನು ಕಡ್ಡಾಯವಾಗಿ ಓದೋಣ. ಉದಾಹರಣೆಗೆ:
  - ಸಂತೋಷ ಕೌಲಗಿ ಅವರು ಅನುವಾದಿಸಿ ಬರೆದಿರುವ **'ಒಂದು ಹುಲ್ಲಿನ ಕ್ರಾಂತಿ'**.
  - ನಾಗೇಶ್ ಹೆಗಡೆಯವರು ಬರೆದಿರುವ **'ಇರುವುದೊಂದೇ ಭೂಮಿ'**.
  - ನಾಡೋಜ ಎಸ್.ಆರ್. ರಾಮಸ್ವಾಮಿಯವರು ಬರೆದಿರುವ **'ಶತಮಾನದ ತಿರುವಿನಲ್ಲಿ ಭಾರತ'**
- ನಮ್ಮ ಸುತ್ತಮುತ್ತಲಿರುವ ಪ್ರೌಢಶಾಲೆಗಳಲ್ಲಿ ಸಾವಯವ ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ಮಕ್ಕಳಿಗೆ ನೀಡೋಣ.
- ಭಾರತೀಯ ತಳಿಯ ಗೋವುಗಳ ಹಾಲಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿದೆ. ವಿದೇಶೀ ತಳಿಯ ಹಸುವಿನ ಹಾಲಿನಿಂದ ಹಲವು ಆರೋಗ್ಯ ಸಮಸ್ಯೆಗಳುಂಟಾಗುವುದೆಂದು ಇತ್ತೀಚಿನ ಸಂಶೋಧನೆಗಳು ಹೇಳುತ್ತಿವೆ. ದೇಶೀ ತಳಿಯ ಗೋಸಾಕಣೆಯಿಂದ ನಮಗೆ ಆರೋಗ್ಯವಷ್ಟೇ ಅಲ್ಲದೇ, ಸಾವಯವ ಕೃಷಿಗೂ ಸಹಕಾರಿ. ಕನಿಷ್ಠ ಒಂದು ದೇಶೀ ಗೋತಳಿಯನ್ನು ನಮ್ಮ ಮನೆಯಲ್ಲಿ ಸಾಕಲು ಪ್ರಾರಂಭಿಸಬಹುದೇ?


ಲೇಖಕರು : **ಎ.ಎಸ್. ಆನಂದ್**, ಸಾವಯವ ಕೃಷಿ ಪರಿವಾರ, 94482 04831

**ಸಮರ್ಥ ಭಾರತ**

**ಒಂದು ಗುರಿ - ಹಲವು ದಾರಿ**

# ವಿದ್ಯಾನಿಧಿ – ಶಿಕ್ಷಣಕ್ಕೆ ಆರ್ಥಿಕ ಸಹಾಯ

ಬುಡಕಟ್ಟು ಹಾಗೂ ಹಿಂದುಳಿದ ವರ್ಗದ ಮಕ್ಕಳು ಕಲಿಕೆಯನ್ನು ಅರ್ಧಕ್ಕೇ ನಿಲ್ಲಿಸುವ ಅನೇಕ ಕಾರಣಗಳಲ್ಲಿ ಆರ್ಥಿಕ ಸಂಪನ್ಮೂಲದ ಕೊರತೆ ಬಹುಮುಖ್ಯವಾದುದು. ಕುಟುಂಬದ ಹೊಟ್ಟೆಹೊರೆಯುವ ಸಲುವಾಗಿ ಸಣ್ಣ ವಯಸ್ಸಿನಲ್ಲೇ ದುಡಿಯಬೇಕಾದ ಅನಿವಾರ್ಯತೆ ಒಂದೆಡೆಯಾದರೆ ಶಾಲೆ ಕಾಲೇಜುಗಳ ಶುಲ್ಕ, ಪುಸ್ತಕ ಸಾಮಗ್ರಿಗಳಿಗೆ ಹಣವನ್ನು ಒದಗಿಸಲಾಗದ ದುಃಸ್ಥಿತಿ ಅನೇಕರನ್ನು ಮೂಲಭೂತ ಶಿಕ್ಷಣದಿಂದ ವಂಚಿತರನ್ನಾಗಿಸುತ್ತದೆ.

ಈ ನಿಟ್ಟಿನಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡುವ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಯೂತ್ ಫಾರ್ ಸೇವಾ ಸಂಸ್ಥೆಯ 'ವಿದ್ಯಾಚೇತನ' ಪ್ರಕಲ್ಪದ ಒಂದು ಯೋಜನೆ 'ವಿದ್ಯಾನಿಧಿ'.

### ಚಟುವಟಿಕೆಯ ಬಗ್ಗೆ

ವಿದ್ಯಾಭ್ಯಾಸದ ಅವಕಾಶವಂಚಿತ ಕುಟುಂಬದ ಮಕ್ಕಳಿಗೆ ಕಲಿಕಾಸಾಮಗ್ರಿ, ಶಾಲಾಶುಲ್ಕ ಮತ್ತು ಸಮವಸ್ತ್ರವನ್ನು ನೀಡುವ ಮೂಲಕ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುವುದು ವಿದ್ಯಾಚೇತನದ ಉದ್ದೇಶವಾಗಿದೆ. ಆಸಕ್ತ ದಾನಿಗಳನ್ನು ಅರ್ಹ ವಿದ್ಯಾರ್ಥಿಗಳೊಂದಿಗೆ ಜೋಡಿಸುವುದು, ಸ್ವಯಂಸೇವಕರ ಮೂಲಕ ಧನಸಂಗ್ರಹ, ಮಕ್ಕಳ ಶಿಕ್ಷಣ ಪ್ರಗತಿಯನ್ನು ಗಮನಿಸುವುದು, ಕಚೇರಿ ನಿರ್ವಹಣೆ – ಹೀಗೆ ಹಲವು ಚಟುವಟಿಕೆಗಳು ವಿದ್ಯಾಚೇತನದ ಕಾರ್ಯದ ಭಾಗವಾಗಿವೆ.

ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಶಾಲೆಯಲ್ಲಿ ಓದುತ್ತಿರುವ, ಆರ್ಥಿಕವಾಗಿ ಹಿಂದುಳಿದ ವರ್ಗದ 12ನೇ ತರಗತಿಯ ವರೆಗಿನ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾಚೇತನವು ವಿದ್ಯಾರ್ಥಿ ವೇತನ ನೀಡುತ್ತದೆ. ವಿದ್ಯಾರ್ಥಿ ವೇತನವು ಶಾಲೆ/ಕಾಲೇಜು ಶುಲ್ಕ, ಸಮವಸ್ತ್ರ, ಬಸ್‌ಪಾಸ್, ಪುಸ್ತಕ, ಶಿಕ್ಷಣ ಸಾಮಗ್ರಿ ಮತ್ತು ಹಾಸ್ಟೆಲ್ ಶುಲ್ಕವನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿವೇತನ ಯೋಜನೆಯ ನಿರ್ವಹಣೆಗಾಗಿ ವಿದ್ಯಾನಿಧಿಯನ್ನು ಸ್ಥಾಪಿಸಲಾಗಿದೆ.

ಇದಲ್ಲದೇ ವಿದ್ಯಾಚೇತನವು ಸಂಜೆಯ ಸಮಯದಲ್ಲಿ ಟ್ಯೂಶನ್, ಜೀವನ ಕೌಶಲ್ಯ ತರಬೇತಿ, ನಾಗರಿಕ ಜಾಗೃತಿ, ಯೋಗ, ವೃತ್ತಿ ಕೌನ್ಸೆಲಿಂಗ್, ಶಿಕ್ಷಣ ಪ್ರವಾಸ, ಕ್ರೀಡೆ ಹಾಗೂ ಕಲಾ ಪ್ರಕಾರಗಳಲ್ಲಿ ತರಬೇತಿ ನೀಡುವುದು ಮುಂತಾದ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡಿದೆ.

ಕಳೆದ ಹಲವು ವರ್ಷಗಳ ಕಾರ್ಯದ ಪರಿಣಾಮವಾಗಿ ಆರ್ಥಿಕ ಕಾರಣಗಳಿಂದಾಗಿ ಅರ್ಧದಲ್ಲೇ ಶಿಕ್ಷಣವನ್ನು ಮೊಟಕುಗೊಳಿಸಿದ್ದ ಅನೇಕ ವಿದ್ಯಾರ್ಥಿಗಳು ಓದನ್ನು ಮುಂದುವರಿಸಲು ಸಾಧ್ಯವಾಗಿದೆ. ವಿದ್ಯಾಚೇತನವು ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳ ಸ್ಲಂ (ಕೊಳೆಗೇರಿ) ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸವಿರುವ ಹಲವು ಅನಕ್ಷರಸ್ಥ ಹಾಗೂ ಹಿಂದುಳಿದ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವ ಮೂಲಕ ಆ ಮನೆಗಳಿಗೆ ಬೆಳಕು ನೀಡಿದೆ.

### ನಾವೇನು ಮಾಡಬಹುದು?

- ನಮ್ಮ ಊರಿನ ಅಥವಾ ನಾವು ಕಲಿತ ಶಾಲೆಗೆ ಸಹಾಯ ಮಾಡುವುದು. ನಮ್ಮ ನಗರ/ಹಳ್ಳಿಯ ಅಭಿವೃದ್ಧಿ ವಂಚಿತ, ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳು ಓದುತ್ತಿರುವ ಶಾಲೆಯನ್ನು ಗುರುತಿಸುವುದು. ನಮ್ಮ ಸ್ನೇಹಿತರು ಹಾಗೂ ಬಂಧುಗಳ ತಂಡವನ್ನು ಕಟ್ಟಿ ಆ ಶಾಲೆಯ ಅಗತ್ಯಗಳನ್ನು ಪೂರೈಸುವ ಯೋಜನೆ ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಮುಂತಾದವುಗಳ ಕುರಿತು ಚರ್ಚಿಸಿ ಕ್ರಿಯಾಯೋಜನೆಯನ್ನು ರೂಪಿಸುವುದು. ಶಾಲೆಯ ಆಡಳಿತ ವರ್ಗ, ಶಿಕ್ಷಕ ವೃಂದದೊಡನೆ ಚರ್ಚಿಸಿ, ವಿದ್ಯಾಚೇತನ ತಂಡದಿಂದ ಅಗತ್ಯ ಮಾಹಿತಿ ಮಾರ್ಗದರ್ಶನ ಪಡೆದು ನಮ್ಮೂರಿನ ಶಾಲೆಯನ್ನು ಅಭಿವೃದ್ಧಿಪಡಿಸುವುದು.
- ವಿದ್ಯಾಚೇತನದ ಸಹಕಾರದೊಂದಿಗೆ ಪ್ರಚಾರ ನಡೆಸಿ, ವಿದ್ಯಾನಿಧಿ ಯೋಜನೆಗೆ ಅಗತ್ಯವಾದ ನಿಧಿ ಸಂಗ್ರಹಣೆ.
- ನಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ, ಕಂಪನಿಗಳಲ್ಲಿ ಸ್ವಯಂಸೇವಕರ ತಂಡ ಕಟ್ಟಿ ವಿದ್ಯಾನಿಧಿ ಯೋಜನೆಯ ಪ್ರಚಾರ ಮಾಡುವುದು. ಕಂಪನಿಗಳ ಸಾಮಾಜಿಕ ಬದ್ಧತೆ (ಸಿಎಸ್‌ಆರ್) ಯೋಜನೆಗಳಿಂದ ವಿದ್ಯಾನಿಧಿ ಯೋಜನೆಗೆ ಹಣ ಪಡೆಯಲು ಪ್ರಯತ್ನಿಸುವುದು.
- ಕಂಪನಿ ಕ್ಯಾಂಪಸ್, ನಗರಗಳ ವ್ಯಾಪಾರಿ ಸಂಕೀರ್ಣ, ಮಾಲ್‌ಗಳು ಮುಂತಾದ ಜನನಿಬಿಡ ಪ್ರದೇಶಗಳಲ್ಲಿ ಸ್ಟಾಲ್‌ಗಳನ್ನು ಹಾಕಿ ಸಂಪನ್ಮೂಲ ಸಂಗ್ರಹಣೆ ಮಾಡುವುದು.
- ಆರ್ಥಿಕ ಸಹಾಯದ ಅಗತ್ಯವಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುವುದು, ಅವರಿಗೆ ವಿದ್ಯಾಚೇತನದ ಮೂಲಕ ಸಹಾಯ ದೊರಕಿಸುವಲ್ಲಿ ನೆರವಾಗುವುದು.
- ಶಿಕ್ಷಣಕ್ಕೆ ನೆರವಾಗಬಲ್ಲ ಆಸಕ್ತ ದಾನಿಗಳನ್ನು ಗುರುತಿಸಿ ಸಹಾಯದ ಅಗತ್ಯವಿರುವ ವಿದ್ಯಾರ್ಥಿಗಳೊಡನೆ ಜೋಡಿಸುವುದು.
- ಅನುದಾನಗಳಿಗಾಗಿ ಟ್ರಸ್ಟ್/ಪ್ರತಿಷ್ಠಾನಗಳನ್ನು ಸಂಪರ್ಕಿಸುವುದು.
- ಅಂತರ್ಜಾಲದ ಮೂಲಕ ನಿಧಿ ಸಂಗ್ರಹ
  ಉದಾ: globalGiving.org.
- ಅಂತರ್ಜಾಲ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚಿನ ಜನರನ್ನು ತಲಪುವುದು. ಡಿಜಿಟಲ್ ಜಾಹೀರಾತು ವಿನ್ಯಾಸ, ಬರಹಗಳ ಮೂಲಕ ಸಂಪರ್ಕ ಮಾಡುವುದು.
- ಇ–ಮೇಲ್ ಸರ್ವರ್ ಹಾಗಾ ಸಾಫ್ಟ್‌ವೇರ್ ಸೆಟ್ ಅಪ್ ಮಾಡುವುದು, ಇ–ಮೇಲ್ ಕಳಿಸುವುದು ಮುಂತಾದ ಸೇವಾ ಚಟುವಟಿಕೆಗಳ ನಿರ್ವಹಣೆಗೆ ಅಗತ್ಯ ತಾಂತ್ರಿಕ ಸಹಾಯ ನೀಡುವುದು.

**ಸಂಪರ್ಕ:** ಜ್ಞಾನಗಿರಿ, #75/76, 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಸೌದಾಮಿನಿ ಬಡಾವಣೆ, ಕೋಣನಗುಂಟೆ,
ಸೌದಾಮಿನಿ ಕಲ್ಯಾಣ ಮಂಟಪದ ಎದುರು, ಬೆಂಗಳೂರು–560 062 ದೂ: 080–26321160
ಇ–ಮೇಲ್ : thechild@vidyachetana.org ವೆಬ್‌ಸೈಟ್ : www.vidyachetana.org

# ಗ್ರಾಮ ಅಭಿವೃದ್ಧಿಗೆ 11 ಎಕರೆ ಹೊಲ ಮಾರಿದ!

ಆ ಯುವಕ ಆಗತಾನೇ ಪಿಯುಸಿ ಮುಗಿಸಿದ್ದ. ಕುಟುಂಬದ 35 ಎಕರೆ ಹೊಲದಲ್ಲಿ ಕೃಷಿ ಮಾಡಲು ನಿಂತ. ಗ್ರಾಮದ ಅಭಿವೃದ್ಧಿಗಾಗಿ ಏನಾದರೂ ಮಾಡಬೇಕು ಎಂಬ ತುಡಿತ ಉಂಟಾಯಿತು. ಅದಕ್ಕಾಗಿ ಸ್ನೇಹಿತರೊಂದಿಗೆ ಯುವ ಸಂಘ ಕಟ್ಟಿದ. ಗ್ರಾಮ ಅಭಿವೃದ್ಧಿಗೆ ಪಂಚಾಯತ್ ಅನುದಾನ ಸಿಗದಿದ್ದಾಗ ತನ್ನ 11 ಎಕರೆ ಹೊಲವನ್ನೇ ಮಾರಿದ. 1500 ಅಡಿಯಷ್ಟು ಸಿಸಿ ರಸ್ತೆ, ಬಯಲು ರಂಗ ಮಂದಿರ, ಮನೆಗೊಂದು ಶೌಚಾಲಯ ಹೀಗೆ ಹಲವಾರು ಅಭಿವೃದ್ಧಿ ಕೆಲಸ ಮಾಡಿದ. ಈತ ಮಾಡಿದ ಕೆಲಸಕ್ಕೆ ಗ್ರಾಪಂ ಅಧ್ಯಕ್ಷ ಪಟ್ಟ ಆತನಿಗೇ ಒಲಿದು ಬಂತು. ಈಗ ಆ ಹಳ್ಳಿ ಜಿಲ್ಲೆಯಲ್ಲೇ ಮಾದರಿ ಗ್ರಾಮವಾಗಿ ಆಯ್ಕೆಯಾಗಿದೆ. ಸ್ವತಃ ಹೈಕೋರ್ಟ್ ನ್ಯಾಯಮೂರ್ತಿಗಳು ಈ ಗ್ರಾಮದ ಸಾಧನೆ ಮೆಚ್ಚಿಕೊಂಡಿದ್ದಾರೆ. ಆ ಹಳ್ಳಿಯಂತೆ ಎಲ್ಲ ಹಳ್ಳಿಗಳೂ ಅಭಿವೃದ್ಧಿಪಡಿಸಿ ಎಂಬ ಸೂಚನೆಯನ್ನೂ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಇದು ಯಾವುದೋ ಸಿನಿಮಾದ ಕಥೆಯಲ್ಲ. ಅಚ್ಚರಿಯ ರೀತಿಯಲ್ಲಿ ಅಭಿವೃದ್ಧಿಯಾಗಿದ್ದು ಮುಧೋಳ ತಾಲೂಕು ಹಲಗಲಿ ಗ್ರಾಪಂ ವ್ಯಾಪ್ತಿಯ ಮೆಳ್ಳಿಗೇರಿ ಗ್ರಾಮ. ಗ್ರಾಮ ಅಭಿವೃದ್ಧಿಗಾಗಿ ಭೂಮಿ ಮಾರಿದ ವ್ಯಕ್ತಿ 34 ವರ್ಷದ ರಮೇಶ ಜೀರಗಾಳ.

ರಮೇಶ ಅವರು ಗ್ರಾಪಂ ಸದಸ್ಯನಾಗುವ ಮೊದಲು ಏಳು ಎಕರೆ ಭೂಮಿ ಮಾರಿ 1500 ಅಡಿ ಉದ್ದದ ಕಾಂಕ್ರೀಟ್ ರಸ್ತೆ ಮತ್ತು ಒಳ ಚರಂಡಿ ಮಾಡಿಸಿದ್ದಾರೆ. ಇವರ ಅಭಿವೃದ್ಧಿಪರ ನಿಲುವು ಕಂಡು ಗ್ರಾಮಸ್ಥರು ಆತನನ್ನು ಸದಸ್ಯನನ್ನಾಗಿ ಮಾಡಿದರು. ಮುಂದೆ 2012ರಲ್ಲಿ ಹಲಗಲಿ ಗ್ರಾಪಂಗೆ ಅಧ್ಯಕ್ಷನೂ ಆದರು. ಬಳಿಕ ಸರ್ಕಾರದ ವಿವಿಧ ಯೋಜನೆ ಹುಡುಕಿ ಅದರಡಿ ಗ್ರಾಮಕ್ಕೆ ಹಣ ತಂದರು. 57.50 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಸಹಿತ ಒಳ ಚರಂಡಿ ನಿರ್ಮಿಸಲಾಗಿದೆ. ಒಟ್ಟು 467 ಕುಟುಂಬಗಳಲ್ಲಿ 312 ಕುಟುಂಬಕ್ಕೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿದೆ. ಇನ್ನುಳಿದ ಕುಟುಂಬಗಳಿಗೆ ಜೂನ್ ಒಳಗಾಗಿ ವೈಯಕ್ತಿಕ ಶೌಚಾಲಯ ನಿರ್ಮಿಸಲಾಗುತ್ತಿದೆ. ಊರಿಗೆ ಕಾಲಿಟ್ಟರೆ ತಿಪ್ಪೆಗುಂಡಿ ಸ್ವಾಗತಿಸುವುದನ್ನು ತಪ್ಪಿಸಲು ಗ್ರಾಮದ ಎರಡು ಕಡೆಗೆ ಆಧುನಿಕ ಮಾದರಿಯ ತಿಪ್ಪೆಗುಂಡಿ ನಿರ್ಮಿಸಲಾಗಿದೆ. 52 ರೈತ ಕುಟುಂಬಗಳಿಗೆ ಇವುಗಳನ್ನು ನೀಡಲು ಯೋಜನೆ ಹಾಕಿಕೊಳ್ಳಲಾಗಿದೆ. ಇದಕ್ಕಾಗಿ ಸುಮಾರು 3 ಲಕ್ಷ ರೂ. ಅನುದಾನವನ್ನು 13ನೇ ಹಣಕಾಸು ಯೋಜನೆಯಡಿ ಬಳಸಲಾಗಿದೆ.

ಮೆಳ್ಳಿಗೇರಿ ಗ್ರಾಮವನ್ನು 2014–15ನೇ ಸಾಲಿನ ಮಾದರಿ ಗ್ರಾಮವಾಗಿ ಆಯ್ಕೆಯಾಗಿದೆ. ಪ್ರತಿ ಓಣಿ ಮತ್ತು ಮನೆಗೆ ಒಳಚರಂಡಿ ಸಂಪರ್ಕ ಜಾಲ ಕಲ್ಪಿಸಲಾಗಿದೆ. ಇಡಿ ಗ್ರಾಮ ಸ್ವಚ್ಛಗ್ರಾಮವಾಗಿ ಪರಿವರ್ತಿತಗೊಂಡಿದೆ. ಗ್ರಾಪಂ ವಾರ್ಷಿಕ ಆದಾಯ ಹೆಚ್ಚಿಸಲು 20 ಎಕರೆ ಭೂಮಿಯಲ್ಲಿ ನೂರಾರು ವರ್ಷಗಳಿಂದ ಬೆಳೆದಿದ್ದ ಮುಳ್ಳು–ಕಂಟಿ ಸ್ವಚ್ಛಗೊಳಿಸಿ, 550 ಗಂಟೆ ಪ್ರದೇಶವನ್ನು ಜೆಸಿಬಿ ಮೂಲಕ ಸಮತಟ್ಟು ಮಾಡಲಾಗಿದೆ. ಇದಕ್ಕೆ ಯಾವುದೇ ಯೋಜನೆಯಡಿ ಹಣ ಖರ್ಚು ಹಾಕಲು ಬರಲಿಲ್ಲ. ಹೀಗಾಗಿ ಸ್ವಂತ ಹಣ ಕೊಟ್ಟಿದ್ದೇನೆ. ಒಳ ಚರಂಡಿಯಿಂದ ಸಂಗ್ರಹವಾಗುವ ನೀರನ್ನೇ ಶುದ್ಧೀಕರಿಸಿ ಗ್ರಾಮದ ಸಮುದಾಯ ಭೂಮಿಯ 20 ಎಕರೆಯಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಮುಂತಾದ ಚಟುವಟಿಕೆ ನಡೆಸಲು ಉದ್ದೇಶಿಸಲಾಗಿದೆ ಎನ್ನುತ್ತಾರೆ ರಮೇಶ್ ಅವರು.

ಕೃಪೆ: ಉದಯವಾಣಿ

# ಚೀನಾ ಹಿಂದಿಕ್ಕಲಿರುವ ಭಾರತ

ಅಭಿವೃದ್ಧಿಯ ಹಾದಿಯಲ್ಲಿ ಮುನ್ನುಗ್ಗುತ್ತಿರುವ ಭಾರತದ ಒಟ್ಟಾರೆ ಆಂತರಿಕ ಉತ್ಪಾದನೆ (ಜಿಡಿಪಿ) ದರವು 2015ರ ವೇಳೆಗೆ ಚೀನಾವನ್ನೂ ಮೀರಿಸಲಿದೆ. ಈ ಮೂಲಕ ಏಷ್ಯಾಖಂಡದಲ್ಲಿ ಭಾರತ ಶೀಘ್ರವೇ ಮೊದಲ ಸ್ಥಾನ ಪಡೆದುಕೊಳ್ಳಲಿದೆ ಎಂದು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ತಿಳಿಸಿದೆ. ಸರ್ಕಾರದ ಸಾಂಸ್ಥಿಕ ಸುಧಾರಣಾ ಯೋಜನೆಗಳು ಮತ್ತು ಬಾಹ್ಯ ಬೆಂಬಲ ಉತ್ತಮವಾಗಿರುವುದರಿಂದ ದೇಶದ ಅಭಿವೃದ್ಧಿ ಮತ್ತು ಹೂಡಿಕೆದಾರರ ವಿಶ್ವಾಸ ಎರಡೂ ಸುಧಾರಿಸಲಿವೆ. ಇದರಿಂದಾಗಿ 2015–16ರಲ್ಲಿ ಶೇ. 7.8 ರಷ್ಟು ಮತ್ತು 2016–17ರಲ್ಲಿ ಶೇ. 8.2 ರಷ್ಟು ಜಿಡಿಪಿ ಪ್ರಗತಿ ನಿರೀಕ್ಷಿಸಬಹುದಾಗಿದೆ ಎಂದು 'ಎಡಿಬಿ'ನ ಏಷ್ಯನ್ ಡೆವಲಪ್‌ಮೆಂಟ್ ಔಟ್‌ಲುಕ್ ತಿಳಿಸಿದೆ. ಇದೇ ವೇಳೆ ಚೀನಾದ ಆರ್ಥಿಕ ಪ್ರಗತಿ ಕುಸಿತದ ಹಾದಿಯಲ್ಲಿದ್ದು, ಜಿಡಿಪಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 7.4ರಷ್ಟಿದ್ದು ಮುಂದಿನ ಹಣಕಾಸು ವರ್ಷದಲ್ಲಿ ಶೇ. 7.2ಕ್ಕೆ ಹಾಗೂ 2016–17ರಲ್ಲಿ ಶೇ. 7ಕ್ಕೆ ಕುಸಿಯಲಿದೆ ಎಂದು ಎಡಿಪಿ ಅಂದಾಜು ಮಾಡಿದೆ. ದೇಶಿ ತಯಾರಿಕೆಗೆ ಉತ್ತೇಜನ ನೀಡುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 'ಭಾರತದಲ್ಲಿ ತಯಾರಿಸಿ'(ಮೇಕ್ ಇನ್ ಇಂಡಿಯಾ) ಅಭಿಯಾನದ ಬಗ್ಗೆ ಎಡಿಬಿ ಮೆಚ್ಚುಗೆ ವ್ಯಕ್ತಪಡಿಸಿದೆ.

# ಪಶ್ಚಿಮಘಟ್ಟ ಉಳಿಸುವ ಬದ್ಧತೆ ಪ್ರಕಟಿಸದ ರಾಜ್ಯಸರ್ಕಾರ

## ಕೇವಲ 153 ಗ್ರಾಮಗಳ ಸೂಕ್ಷ್ಮ ಪರಿಸರ ಪ್ರದೇಶ ಘೋಷಣೆಗೆ ಅಸ್ತು




ಆರು ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮಘಟ್ಟದ ಜೀವವೈವಿಧ್ಯವನ್ನು ಉಳಿಸುವ ಸಂಬಂಧ ಕೇಂದ್ರ ಸರ್ಕಾರ ರಚಿಸಿದ ಡಾ. ಕೆ. ಕಸ್ತೂರಿರಂಗನ್ ಸಮಿತಿಯ ಶಿಫಾರಸುಗಳನ್ನು ಜಾರಿಗೆ ಕರ್ನಾಟಕ ಸರ್ಕಾರ ತಕರಾರು ತೆಗೆದಿದೆ. ಕಸ್ತೂರಿರಂಗನ್ ವರದಿಯಲ್ಲಿ ರಾಜ್ಯದ 1438 ಗ್ರಾಮಗಳನ್ನು ಸೂಕ್ಷ್ಮ ಪರಿಸರ ಪ್ರದೇಶ ಎಂದು ಗುರುತಿಸಲಾಗಿತ್ತು. ಆದರೆ ಸಮಿತಿಯ, ಮಾನವ ನಿರ್ಮಿತ ಅರಣ್ಯ ಪ್ರದೇಶ ಮತ್ತು ನೈಸರ್ಗಿಕ ಅರಣ್ಯ ಎಂಬ ವರ್ಗೀಕರಣವೇ ಸರಿಯಿಲ್ಲ; ಹೀಗಾಗಿ ಕೇವಲ 153 ಗ್ರಾಮಗಳನ್ನು ಮಾತ್ರ ಈ ವಲಯಕ್ಕೆ ಸೇರಿಸಲು ಸಮ್ಮತಿಸುವುದಾಗಿ ರಾಜ್ಯ ಸರ್ಕಾರ ಕೇಂದ್ರ ಸಚಿವಾಲಯಕ್ಕೆ ಪತ್ರ ಬರೆದಿದೆ. ಆದರೆ ವಾಸ್ತವವಾಗಿ ಈ 153 ಗ್ರಾಮಗಳು ಈಗಾಗಲೇ ರಕ್ಷಿತ ಅರಣ್ಯ ಅಥವಾ ರಾಷ್ಟ್ರೀಯ ಉದ್ಯಾನಗಳ ವ್ಯಾಪ್ತಿಯಲ್ಲಿದ್ದು, ಅವುಗಳಿಗೆ ಅರಣ್ಯ ಕಾಯ್ದೆ ಅನ್ವಯವಾಗುತ್ತಿದೆ. ಅದಿರು–ಕಲ್ಲು ಗಣಿಗಾರಿಕೆ ಮತ್ತು 20 ಸಾವಿರ ಚದರ ಮೀಟರ್‌ಗಿಂತ ಹೆಚ್ಚು ವಿಸ್ತೀರ್ಣದ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಹಾಕುವ ಶಿಫಾರಸು ವರದಿಯಲ್ಲಿರುವುದರಿಂದ ಆರಂಭದಿಂದಲೂ ಪಶ್ಚಿಮಘಟ್ಟ ಪ್ರದೇಶದ ಜನಪ್ರತಿನಿಧಿಗಳು ಸ್ವಹಿತಾಸಕ್ತಿಯಿಂದ ಬಹಿರಂಗವಾಗಿಯೇ ವಿರೋಧವನ್ನು ವ್ಯಕ್ತಪಡಿಸಿದ್ದರು. ಸರಕಾರ ಕೂಡಾ ಜನಾಭಿಪ್ರಾಯ ಪಡೆಯುವಾಗ ಕಸ್ತೂರಿರಂಗನ್ ಸಮಿತಿ ವರದಿಯ ಬಗ್ಗೆ ಅರಿವು ಮೂಡಿಸದೆ ಜನಾಭಿಪ್ರಾಯ ಪಡೆಯಿತು. 45 ಸಾವಿರಕ್ಕೂ ಹೆಚ್ಚು ಸಸ್ಯ ಪ್ರಭೇದ ಮತ್ತು 91 ಸಾವಿರ ಜೀವಸಂಕುಲವಿರುವ ಪಶ್ಚಿಮಘಟ್ಟಗಳ ಪ್ರಭೇದಗಳನ್ನು ಸಂರಕ್ಷಿಸಬೇಕು ಎನ್ನುವ ಉದ್ದೇಶದಿಂದ ಕೇಂದ್ರ ಸರ್ಕಾರ ರಚಿಸಿದ್ದ ಪ್ರೊ. ಮಾಧವ ಗಾಡ್ಗೀಳ್ ಸಮಿತಿಯ ವರದಿಯು ಪಶ್ಚಿಮಘಟ್ಟದ ಶೇ. 64ರಷ್ಟು ಭಾಗವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಪ್ರಕಟಿಸಿತ್ತು. ಇದಕ್ಕೆ ಭಾರಿ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ವರದಿಯ ಪರಿಶೀಲನೆಗೆ ರಚಿಸಿದ್ದ ಕಸ್ತೂರಿರಂಗನ್ ಸಮಿತಿ ಘಟ್ಟದ ಶೇ 37ರಷ್ಟು ಭಾಗವನ್ನು ಮಾತ್ರ ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿತ್ತು.

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಶ್ರೀವತ್ಸ, ಸುಮಂತ್ ನೆಮ್ಮಾರ್, ಪ್ರವೀಣ್ ಪಟವರ್ಧನ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

# ನಾಲುದ್ದದ ಸುದ್ದಿಗಳು



- ಟಿಬೆಟ್‌ನಲ್ಲಿರುವ ಎಲ್ಲ ಬೌದ್ಧ ಮಂದಿರಗಳ ಮೇಲೆ ರಾಷ್ಟ್ರಧ್ವಜ ಹಾರಿಸಬೇಕು ಎಂದು ಚೀನಾ ಆದೇಶಿಸಿದೆ. ಕಮ್ಯೂನಿಸ್ಟ್ ಪಕ್ಷದ ಆಡಳಿತ ವಿರೋಧಿಸಿ ಆತ್ಮಾಹುತಿ ಘಟನೆಗಳಿಗೆ ಈ ಪ್ರಾಂತ್ಯ ಸಾಕ್ಷಿಯಾಗಿದೆ ಎಂಬುದು ಮುಖ್ಯಕಾರಣ ಎನ್ನಲಾಗಿದೆ. ಎಲ್ಲ ಬೌದ್ಧ ದೇವಾಲಯಗಳ ಮೇಲೆ ಚೀನಾ ಧ್ವಜ ಹಾರಿಸಬೇಕು. ಇಲ್ಲಿ ಸಂವಹನ ಕೇಂದ್ರ ಆರಂಭಿಸಬೇಕು, ಚೀನಾದ ಪತ್ರಿಕೆಗಳನ್ನು ತರಿಸಬೇಕು ಎಂದು ಕಮ್ಯೂನಿಸ್ಟ್ ಪಕ್ಷದ ಟಿಬೆಟ್‌ನ ಮುಖ್ಯಸ್ಥ ಚೆನ್ ಕ್ವಾಂಗೊ ಹೇಳಿದ್ದಾರೆ. ಚೀನಾದಲ್ಲಿರುವ ಕಮ್ಯುನಿಸ್ಟ್ ನೇತೃತ್ವದ ಆಡಳಿತವು ಹೇಗೆ ದೇವರನ್ನು ಸಹಿಸುವುದಿಲ್ಲವೋ, ಅದೇ ರೀತಿ ಸಂಸ್ಕೃತಿಯನ್ನು ಕೂಡ ಸಹಿಸುವುದಿಲ್ಲ. ಅದು ಚೀನಾದಾದ್ಯಂತ ಯೂನಿಕಲ್ಚರ್ (ಏಕಸಂಸ್ಕೃತಿ) ತರಬೇಕೆಂದು ಹೊರಟಿದೆ.



- **ಸಂಪೂರ್ಣ ಸ್ವಾವಲಂಬಿಯಾಗಿ ನಿರಂತರ ವಿದ್ಯುತ್ ಒದಗಿಸುವ, 'ಮೈಕ್ರೊಗ್ರಿಡ್' ತಂತ್ರಜ್ಞಾನವನ್ನು ಮೈಸೂರಿನ ಎಚ್.ಡಿ. ಕೋಟೆ ತಾಲ್ಲೂಕಿನ ಗಿರಿಜನರ ಹಾಡಿಯಲ್ಲಿ ದೇಶದಲ್ಲೇ ಮೊಟ್ಟಮೊದಲು ಪ್ರಾಯೋಗಿಕವಾಗಿ ಪೂರ್ಣಪ್ರಮಾಣದಲ್ಲಿ ಅಳವಡಿಸುವ ಕಾರ್ಯಕ್ಕೆ ಈಗಾಗಲೆ ಚಾಲನೆ ದೊರೆತಿದೆ. ವಿದ್ಯುತ್ ಕಡಿತ, ದುಬಾರಿ ಬೆಲೆ, ಬೃಹತ್ ವಿದ್ಯುತ್‌ಜಾಲವನ್ನು ನಿರ್ಮಿಸುವ ಅಧಿಕ ವೆಚ್ಚದಂತಹ ಕಾರಣಗಳಿಂದಾಗಿ ಇಂದಿಗೂ ಅನೇಕ ಕುಗ್ರಾಮಗಳಿಗೆ ವಿದ್ಯುತ್ ಪೂರೈಕೆ ಇಲ್ಲದಂತಾಗಿದೆ. ಇದಕ್ಕಾಗಿ ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಿಕೊಂಡು ವಿದ್ಯುತ್ ಉತ್ಪಾದಿಸಿ ಉಚಿತವಾಗಿ ವಿತರಿಸುವ ಕಾರ್ಯಕ್ಕಾಗಿಯೇ ವಿಶೇಷ ತಂತ್ರಜ್ಞಾನವೊಂದನ್ನು ಅಳವಡಿಸಲಾಗುತ್ತಿದೆ. ಮೈಸೂರಿನ ರಾಷ್ಟ್ರೀಯ ಎಂಜಿನಿಯರುಗಳ ಸಂಸ್ಥೆಯ (ಎನ್‌ಐಇ) 'ನವೀಕರಿಸಬಲ್ಲ ಶಕ್ತಿ ಹಾಗೂ ಸುಸ್ಥಿರ ತಂತ್ರಜ್ಞಾನ ಕೇಂದ್ರ' (ಕ್ರೆಸ್ಟ್) ಅಮೆರಿಕದ ಮ್ಯಾಡಿಸನ್‌ನ ವಿಲ್ಕಿನ್‌ಸನ್ ಮ್ಯಾಡಿಸನ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಈ ಯೋಜನೆ ಹಮ್ಮಿಕೊಂಡಿದ್ದು, ಸುಮಾರು 40 ಮನೆಗಳುಳ್ಳ ಗಿರಿಜನರ ಹಾಡಿಗೆ ಇದರಿಂದ ಪ್ರಯೋಜನ ಸಿಗಲಿದೆ.**



- ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆ ಮತ್ತು ಭಾರತ–ಜಪಾನ್ ನಡುವಿನ ವಿಜ್ಞಾನ ಸಹಕಾರಕ್ಕೆ ಜಪಾನ್ ಸರಕಾರ ಕನ್ನಡಿಗ ಭಾರತ ರತ್ನ ಸಿಎನ್‌ಆರ್ ರಾವ್ ಅವರಿಗೆ ಜಪಾನ್ ದೇಶದ ಅತ್ಯುತ್ತಮ ನಾಗರಿಕ ಗೌರವ ಪ್ರಶಸ್ತಿ ನೀಡಿದೆ. ಈ ಮೂಲಕ ಅವರು ಜಪಾನ್ ದೇಶದ ಅತ್ಯುತ್ತಮ ನಾಗರಿಕ ಗೌರವಕ್ಕೆ ಪಾತ್ರರಾಗುತ್ತಿರುವ ಮೊದಲ ಭಾರತೀಯ ವಿಜ್ಞಾನಿ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

- **ವಿದೇಶಿ ದೇಣಿಗೆ ಪಡೆದು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಪದ ಮೇಲೆ 10,117 ಎನ್‌ಜಿಒ (ಸರ್ಕಾರೇತರ ಸಂಸ್ಥೆ)ಗಳ ಪರವಾನಗಿಯನ್ನು ರದ್ದುಗೊಳಿಸಿ ಕೇಂದ್ರ ಸರಕಾರ ಆದೇಶ ಹೊರಡಿಸಿದೆ. ವಿದೇಶಗಳಿಂದ ಹಣಕಾಸಿನ ನೆರವು ಪಡೆದು ದೇಶದಲ್ಲಿ ನಡೆಯುವ ವಿವಿಧ ಚಟುವಟಿಕೆಗಳ ಪರ–ವಿರೋಧವಾಗಿ ಹೋರಾಡುವ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ 2014ರ ಅಕ್ಟೋಬರ್ 16ರಂದು ಲೆಕ್ಕಪರಿಶೋಧನೆ ವರದಿ ನೀಡುವಂತೆ ಸೂಚಿಸಿ ಕೇಂದ್ರ ಸರಕಾರ 10,344 ಎನ್‌ಜಿಒಗಳಿಗೆ ನೋಟಿಸ್ ಜಾರಿ ಮಾಡಿತ್ತು. ಆದರೆ ಕೇವಲ 229 ಸಂಸ್ಥೆಗಳು ಮಾತ್ರ ನೋಟಿಸ್‌ಗೆ ಉತ್ತರ ನೀಡಿ ಲೆಕ್ಕಪರಿಶೋಧನೆ ವರದಿ ನೀಡಿದ್ದವು. ಉಳಿದ ಎನ್‌ಜಿಒಗಳು ಇದಕ್ಕೆ ಉತ್ತರ ನೀಡುವ ಗೋಜಿಗೆ ಹೋಗಿಲ್ಲ. ಹೀಗಾಗಿ ಕೇಂದ್ರ ಸರಕಾರ ಇಂತಹ 10,117 ಎನ್‌ಜಿಒಗಳ ಪರವಾನಗಿ ರದ್ದುಗೊಳಿಸಿ ಆದೇಶ ಹೊರಡಿಸಿದೆ. ಈ ಎನ್‌ಜಿಒಗಳು 2008ರಿಂದ 10ರ ಅವಧಿಯಲ್ಲಿ ಸುಮಾರು 128 ದೇಶಗಳಿಂದ ಸಾವಿರಾರು ಕೋಟಿ ದೇಣಿಗೆ ಪಡೆದಿದ್ದವು ಎನ್ನಲಾಗಿದೆ.**



- ಕಪ್ಪುಹಣ ನಿಯಂತ್ರಣ ಹಾಗೂ ಭ್ರಷ್ಟಾಚಾರ ನಿಗ್ರಹಕ್ಕೆ ಮಹತ್ವದ ಹೆಜ್ಜೆ ಇರಿಸಿರುವ ಕೇಂದ್ರ ಸರಕಾರ 1988ರ ಭ್ರಷ್ಟಾಚಾರ ನಿಗ್ರಹ ಕಾನೂನಿಗೆ ತಿದ್ದುಪಡಿ ತಂದಿದೆ. ಭ್ರಷ್ಟಾಚಾರ ಪ್ರಕರಣದಲ್ಲಿ ಸಿಕ್ಕಿಬೀಳುವವರಿಗೆ ಈಗಿರುವ 5 ವರ್ಷದಿಂದ ಗರಿಷ್ಠ 7 ವರ್ಷ ಶಿಕ್ಷೆ ನೀಡಲು ಅವಕಾಶ, ಪ್ರಕರಣಗಳನ್ನು ಎರಡು ವರ್ಷಗಳೊಳಗೆ ತನಿಖೆ ಪೂರ್ಣಗೊಳಿಸುವ, ಪೂರೈಕೆ ವಿಭಾಗದಲ್ಲಿ ನಡೆಯುವ ಭ್ರಷ್ಟಾಚಾರಗಳಿಗೆ ಕಂಪೆನಿಗಳನ್ನೇ ಹೊಣೆಗಾರಿಕೆ ಮಾಡುವುದು ಸೇರಿದಂತೆ ಅನೇಕ ಕಠಿಣ ಅಂಶಗಳನ್ನು ಕಾಯ್ದೆ ಒಳಗೊಂಡಿದೆ.



- **ಮಹಾರಾಷ್ಟ್ರದಲ್ಲಿ ಗೋಹತ್ಯೆ ನಿಷೇಧಿಸಿರುವ ಮಹಾರಾಷ್ಟ್ರ ಸರಕಾರದ ಕ್ರಮವನ್ನು (ಗೋಹತ್ಯಾ ನಿಷೇಧ ಕಾನೂನನ್ನು) ಬಾಂಬೆ ಹೈಕೋರ್ಟ್ ಎತ್ತಿಹಿಡಿದಿದೆ. ಗೋಹತ್ಯೆ ನಿಷೇಧಿಸಿರುವ ಸರಕಾರದ ಕ್ರಮವನ್ನು ವಿರೋಧಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಸರಕಾರದ ಕ್ರಮವನ್ನು ಎತ್ತಿಹಿಡಿದಿದೆ. ಈ ಕಾನೂನಿನ ಪ್ರಕಾರ, ಮಹಾರಾಷ್ಟ್ರದಲ್ಲಿ ಗೋವು, ಹೋರಿ, ಎತ್ತುಗಳ ಹತ್ಯೆ ಮಾಡುವವರ ವಿರುದ್ಧ ಎಫ್‌ಐಆರ್ ದಾಖಲಿಸಬಹುದು. ಮಾತ್ರವಲ್ಲದೆ ಹೊರಗಡೆ ರಾಜ್ಯಗಳಿಂದ ಹತ್ಯೆಗೈದು ತಂದ ಗೋಮಾಂಸ, ಎತ್ತಿನ ಮಾಂಸದ ಬಳಕೆ, ಸಾಗಣೆ ಹಾಗೂ ಸಂಗ್ರಹವನ್ನು ನಿಷೇಧಿಸಲಾಗಿದೆ.**



- ದೇಶದ ಗಡಿ ಭಾಗಗಳಾದ ಗುಜರಾತ್, ರಾಜಸ್ಥಾನ, ಪಂಜಾಬ್, ಜಮ್ಮು–ಕಾಶ್ಮೀರ, ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಬಾರತ–ಮಾನ್ಮಾರ್ ಗಡಿ ಮೂಲಕ ಮಿಜೋರಾಂವರೆಗೆ ಸಂಪರ್ಕ ಕಲ್ಪಿಸುವ ಮಹತ್ವಾಕಾಂಕ್ಷೆಯ 'ಭಾರತ ಮಾಲಾ' ಎಂಬ ಹೆಸರಿನ ರಸ್ತೆ ಯೋಜನೆ ಕೈಗೊಳ್ಳಲು ಮೋದಿ ನೇತೃತ್ವದ ಕೇಂದ್ರ ಸರಕಾರ ಮುಂದಾಗಿದೆ. 5 ವರ್ಷಗಳ ಅವಧಿಯ ಈ ಯೋಜನೆಗೆ ಸುಮಾರು 14 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ದಕ್ಷಿಣ ಭಾರತದ ಕರಾವಳಿ ನಗರಗಳನ್ನು ಬೆಸದು ನಿರ್ಮಿಸಲುದ್ದೇಶಿಸಿರುವ 'ಸಾಗರ ಮಾಲಾ' ಯೋಜನೆ ಜತೆ ಇದಕ್ಕೆ ಸಂಪರ್ಕ ಕಲ್ಪಿಸಲು ಸರಕಾರ ನಿರ್ಧರಿಸಿದೆ. ಈ ಹಿಂದೆ ಸುವರ್ಣ ಚತುಷ್ಪಥ ಯೋಜನೆಯ ಮೂಲಕ ದೇಶದ ನಾಲ್ಕೂ ದಿಕ್ಕುಗಳನ್ನು ರಸ್ತೆ ಸಂಪರ್ಕದ ಮೂಲಕ ಅಟಲ್ ಬಿಹಾರಿ ವಾಜಪೇಯಿ ಬೆಸೆದಿದ್ದರು.




- **ಪ್ರಾಚೀನ ಭಾರತೀಯರ ಯೋಗ ಪದ್ಧತಿಗೀಗ ಅಮೆರಿಕದಲ್ಲಿ ಭಾರಿ ಮನ್ನಣೆ ಸಿಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಪ್ರಸ್ತಾವ ಪರಿಗಣಿಸಿ ವಿಶ್ವಸಂಸ್ಥೆಯು ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನ ಆಚರಿಸುವುದಾಗಿ ಘೋಷಿಸಿದ ನಂತರ ಯೋಗಕ್ಕೆ ಅಮೆರಿಕ ಸೇರಿದಂತೆ ಜಗತ್ತಿನೆಲ್ಲೆಡೆ ದೊಡ್ಡ ಮಟ್ಟದ ಗೌರವ ಸಿಗತೊಡಗಿದೆ. ಅಮೆರಿಕದ ಸಂಸತ್ತು ಭಾರತೀಯ ರಾಯಭಾರಿ ಕಚೇರಿಯ ಬೆಂಬಲದೊಂದಿಗೆ 'ಸಂಸದೀಯ ಯೋಗ ಸಂಘ' ರಚಿಸಿದ್ದು, ಮೇ 1ರಂದು ಅಮೆರಿಕ ಸಂಸತ್ತಿನ ಇತಿಹಾಸ ಪ್ರಸಿದ್ಧ ಕ್ಯಾನನ್ ಹೌಸ್ ಆಫೀಸ್ ಕಟ್ಟಡದಲ್ಲಿ ಉದ್ಘಾಟನೆಗೊಂಡಿದೆ.**



- ಇಂಡೋ–ಟಿಬೆಟ್ ಗಡಿ ಪೊಲೀಸ್ ಅಧಿಕಾರಿ ಮನ್‌ಜೀತ್ ಸಿಂಗ್ ಅವರಿಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ರಾಷ್ಟ್ರಪತಿ ಭವನದಲ್ಲಿ ಶೌರ್ಯ ಚಕ್ರ ಪ್ರಧಾನ ಮಾಡಿದರು. ಅಫಘಾನಿಸ್ತಾನದ ಭಾರತೀಯ ದೂತಾವಾಸ ಕಚೇರಿ ಮೇಲೆ ಕಳೆದ ವರ್ಷ ನಡೆದ ಉಗ್ರ ದಾಳಿಯ ಸಮಯದಲ್ಲಿ ತಮ್ಮ ನೇತೃತ್ವದ ತಂಡದೊಂದಿಗೆ ಹೋರಾಡಿದ ಮನ್‌ಜೀತ್ ಸಿಂಗ್ ಹಾಗೂ ಕಾರ್ಯಾಚರಣೆಯಲ್ಲಿ ಭಾಗವಹಿಸಿದ 4 ಪೊಲೀಸ್ ಸಿಬ್ಬಂದಿಗೆ ಈ ಗೌರವ ಸಂದಿದೆ.

- **ದೆಹಲಿ ಸೇರಿದಂತೆ 20 ರಾಜ್ಯಗಳು ಈಗಾಗಲೇ ತಂಬಾಕು ನಿಷೇಧಿಸಿದ್ದು, ಇದರಿಂದ ಯಾವುದೇ ತೊಂದರೆಯಾಗದು. ಭಾರತದ ಆಹಾರ ಗುಣಮಟ್ಟ ಹಾಗೂ ಸುರಕ್ಷತೆ ಕಾಯ್ದೆಗೆ ಅನುಗುಣವಾಗಿ, ಎಲ್ಲ ಬಗೆಯ ಜಗಿಯುವ ತಂಬಾಕು ಪದಾರ್ಥಗಳನ್ನು ರಾಜ್ಯದಲ್ಲಿ ನಿಷೇಧಿಸಬೇಕು ಎಂದು ಶಾಸಕ ಎಸ್. ಸುರೇಶ್ ಕುಮಾರ್ ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ. ಇದೇ ವೇಳೆ ರಾಜ್ಯದ ಒಟ್ಟು ಕ್ಯಾನ್ಸರ್ ಪೀಡಿತರಲ್ಲಿ ಶೇ 20ರಷ್ಟು ಜನಕ್ಕೆ ಕ್ಯಾನ್ಸರ್ ಬರಲು ಜಗಿಯುವ ತಂಬಾಕು ಕಾರಣ. ಇವರಲ್ಲಿ ಹೆಚ್ಚಿನವರು 30 ವರ್ಷದೊಳಗಿನವರು. ಸಣ್ಣ ವಯಸ್ಸಿನಲ್ಲಿಯೇ ಇಂತಹ ಮಾರಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ ಎಂದು ಕ್ಯಾನ್ಸರ್ ತಜ್ಞ ವಿಶಾಲ್ ರಾವ್ ಆತಂಕ ವ್ಯಕ್ತಪಡಿಸಿದರು.**



- ನವದೆಹಲಿಯಲ್ಲಿರುವ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 2014ರ ಅತ್ಯುತ್ತಮ ಏರ್‌ಪೋರ್ಟ್ ಎಂಬ ಪ್ರಶಸ್ತಿಗೆ ಪಾತ್ರವಾಗಿದೆ. ವರ್ಷಕ್ಕೆ 2.5 ಕೋಟಿಯಿಂದ 4 ಕೋಟಿಯವರೆಗೆ ಪ್ರಯಾಣಿಕರಿಗೆ ಸೇವೆ ಒದಗಿಸುವ ವಿಶ್ವದ ವಿಮಾನ ನಿಲ್ದಾಣಗಳ ಪೈಕಿ ದೆಹಲಿಯ ವಿಮಾನನಿಲ್ದಾಣವೇ ಶ್ರೇಷ್ಠ ಎನ್ನಲಾಗಿದೆ. ಜೋರ್ಡಾನ್‌ನಲ್ಲಿ ಏಪ್ರಿಲ್ 28ರಂದು ನಡೆದ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಂಡಳಿ ಸಂಸ್ಥೆಯು ನವದೆಹಲಿಯ ಇಂದಿರಾಗಾಂಧಿ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಈ ಪ್ರಶಸ್ತಿ ನೀಡಿದೆ. ಈ ವಿಮಾನ ನಿಲ್ದಾಣ 2011ರಿಂದ 13ರ ವರೆಗಿನ 3 ವರ್ಷಗಳ ಅವಧಿಯಲ್ಲಿ 2ನೇ ಸ್ಥಾನದಲ್ಲಿತ್ತು. ಈಗ ಮೊದಲ ಸ್ಥಾನ ಗಳಿಸಿದೆ. ಈ ವಿಮಾನ ನಿಲ್ದಾಣದಲ್ಲಿ 6 ದೇಶೀಯ ಹಾಗೂ 56 ಅಂತರರಾಷ್ಟ್ರೀಯ ಸಂಸ್ಥೆಗಳ ವಿಮಾನಗಳು ಬಂದುಹೋಗುತ್ತವೆ. ಏರ್‌ಬಸ್ ಎ380ರಂಥಹ ದೈತ್ಯವಿಮಾನಗಳನ್ನು ನಿರ್ವಹಿಸುವಷ್ಟು ಈ ವಿಮಾನ ನಿಲ್ದಾಣ ಸಮರ್ಥವಾಗಿದೆ.



- **ಕರ್ನಾಟಕದ ಮಂಡ್ಯ ಮೂಲದವದಾರ ಪ್ರಸ್ತುತ ಅಮೆರಿಕದಲ್ಲಿ ನೆಲೆಸಿರುವ ವಿವೇಕ ಮೂರ್ತಿ ಅಮೇರಿಕದ ಸರ್ಜನ್ ಜನರಲ್ ಆಗಿ ನಿಯಕ್ತ ರಾಗಿದ್ದಾರೆ. ಮೂವತ್ತೇಳು ವರ್ಷ ವಯಸ್ಸಿನ ವಿವೇಕ ಮೂರ್ತಿ ಒಬಾಮಾ ಆಡಳಿತದ ಅತಿಹಿರಿಯ ರ್‍ಯಾಂಕಿಂಗ್ ಹುದ್ದೆಯಲ್ಲಿರುವ ಭಾರತೀಯ ಮೂಲದ ವ್ಯಕ್ತಿಯಾಗಿದ್ದು ಅತೀ ಕಿರಿಯ ವಯಸ್ಸಿನ ಸರ್ಜನ್ ಜನರಲ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ತನ್ನ ಯಶಸ್ಸಿಗೆ ಅಜ್ಜಿಯ ನಂಬಿಕೆ, ತಂದೆಯ ಪ್ರೋತ್ಸಾಹ, ತಾಯಿಯ ವಾತ್ಸಲ್ಯ, ಸೋದರಿಯ ಹಾಗೂ ಹೆಂಡತಿಯ ಸಹಕಾರವೇ ಕಾರಣವೆನ್ನುವ ಮೂರ್ತಿ ಭಗವದ್ಗೀತೆಯ ಮೇಲೆ ಪ್ರಮಾಣ ಮಾಡಿ ಸರ್ಜನ್ ಜನರಲ್ ಹುದ್ದೆಯ ಅಧಿಕಾರವನ್ನು ವಹಿಸಿಕೊಂಡಿದ್ದು ಇನ್ನೊಂದು ವಿಶೇಷವಾಗಿದೆ. ವಿವೇಕ್ ಇನ್ನು ನಾಲ್ಕು ವರ್ಷಗಳ ಕಾಲ ಅಮೆರಿಕದ 6500 ಸಾರ್ವಜನಿಕ ಆರೋಗ್ಯ ಸೇವೆಗಳ ಮುಖ್ಯಸ್ಥರಾಗಿರುತ್ತಾರೆ.**



- ಚೆನ್ನೈ ಮೂಲದ ವಕೀಲೆ ರಾಜರಾಜೇಶ್ವರಿ ಅಮೆರಿಕದ ನ್ಯೂಯಾರ್ಕ್ ನಗರದ ಕ್ರಿಮಿನಲ್ ನ್ಯಾಯಾಲಯದ ನ್ಯಾಯಾಧೀಶೆಯಾಗಿ ನಿಯುಕ್ತಿಯಾಗಿದ್ದಾರೆ. ಮುಂದಿನ ಹತ್ತು ವರ್ಷಗಳ ಕಾಲ ನ್ಯೂಯಾರ್ಕ್ ನಗರದ ಕ್ರಿಮಿನಲ್ ಮತ್ತು ಕೌಟುಂಬಿಕ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸಲಿರುವ ರಾಜರಾಜೇಶ್ವರಿ ಪ್ರಥಮ ಭಾರತೀಯ ಮಹಿಳಾ ನ್ಯಾಯಾಧೀಶೆಯಾಗಿದ್ದಾರೆ.

- **ನಮ್ಮ ದೇಶವನ್ನು "ಇಂಡಿಯಾ" ಎಂದು ಕರೆಯದೇ "ಭಾರತ" ಎಂದು ಕರೆಯುವುದು ಸೂಕ್ತವೇ? ಎಂದು ದೇಶದ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಕೇಳಿದೆ. ಭಾರತವನ್ನು ಇಂಡಿಯಾ ಎಂದು ಕರೆಯುವುದನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಭಾರತೀಯ ಉಪಖಂಡವನ್ನು ಇಂಡಿಯಾ ಎಂದು ಹಾಗೂ ಇಲ್ಲಿನ ಜನರನ್ನು ಇಂಡಿಯನ್ ಎಂದು ಕರೆಯುವ ಬಗ್ಗೆ ಯಾವುದೇ ಐತಿಹಾಸಿಕ ಪುರಾವೆಗಳಿಲ್ಲ. ಮೊಗಲರೂ ಕೂಡ ಇಂಡಿಯಾ ಎಂದು ಕರೆದಿರಲಿಲ್ಲ. ಇಂಡಿಯಾ ಎನ್ನುವ ಶಬ್ದವು ಬ್ರಿಟಿಷರ ಕಾಲದಲ್ಲಿ ಬಳಕೆಗೆ ಬಂದುದಾಗಿದೆ ಎಂದು ಉಲ್ಲೇಖಿಸಲಾಗಿದೆ. ಸಂವಿಧಾನ ರಚನಾ ಸಭೆಯಲ್ಲಿ ಡಾ. ಅಂಬೇಡಕರ್‌ರು ಈ ವಿಷಯವನ್ನು ವಿಸ್ತ್ರತವಾಗಿ ಚರ್ಚೆ ಮಾಡಿದ್ದು ಸಂವಿಧಾನದ ಮೊದಲ ವಿಧಿಯಲ್ಲಿ "India, that is Bharat, shall be a Union of States" ಎಂದಿರುವುದನ್ನು ಅರ್ಜಿಯಲ್ಲಿ ಉಲ್ಲೇಖಿಸಿದೆ.**



- ಮಾಲೇಗಾಂವ್ ಸ್ಫೋಟ ಪ್ರಕರಣದಲ್ಲಿ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಹಾಗೂ ಲೆಫ್ಟಿನೆಂಟ್ ಕರ್ನಲ್ ಎಸ್.ಪಿ. ಪುರೋಹಿತ್ ಸೇರಿದಂತೆ ಆರು ಆರೋಪಿಗಳ ಜಾಮೀನು ಅರ್ಜಿಗಳನ್ನು ಇನ್ನು ಒಂದು ತಿಂಗಳಿನಲ್ಲಿ ಇತ್ಯರ್ಥಪಡಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸುಪ್ರೀಂಕೋರ್ಟ್ ತಾಕೀತು ಮಾಡಿದೆ. ಯುಪಿಎ ನೇತೃತ್ವದ ಈ ಹಿಂದಿನ ಕೇಂದ್ರ ಸರಕಾರ ತನ್ನ ಕಲ್ಪಿತ 'ಹಿಂದು ಭಯೋತ್ಪಾದನೆ' ಎಂಬ ಗುಲ್ಲನ್ನು ಸಾಬೀತುಪಡಿಸಲು ಉತ್ತರ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಕೋಮು ಸೂಕ್ಷ್ಮ ಪ್ರದೇಶವಾದ ಮಾಲೇಗಾಂವ್‌ನಲ್ಲಿ 2008ರ ಸೆಪ್ಟೆಂಬರ್ 29 ರಂದು ನಡೆದ ಸ್ಫೋಟವನ್ನು ದಾಳವಾಗಿ ಬಳಸಿಕೊಂಡಿತು. ಈ ಸ್ಫೋಟದ ಆರೋಪ ಹೊರಿಸಿ ಸಾಧ್ವಿ ಪ್ರಜ್ಞಾಸಿಂಗ್, ಪುರೋಹಿತ್ ಹಾಗೂ ಇನ್ನಿತರ ನಾಲ್ವರ ವಿರುದ್ಧ ಮೊಕಾ ಕಾಯಿದೆಯಡಿ ಬಂಧಿಸಿತು. ಬಂಧಿಸಿ ಆರು ವರ್ಷಗಳು ಕಳೆದಿದ್ದರೂ ಇವರ ಮೇಲಿನ ಆಪಾದನೆಗೆ ಸಾಕ್ಷ್ಯ ಒದಗಿಸಲು ತನಿಖಾ ಆಯೋಗ ವಿಫಲವಾಗಿದೆ. ಆದರೂ ಜಾಮೀನು ನೀಡದೆ ಆರು ವರ್ಷಗಳಿಗೂ ಹೆಚ್ಚು ಕಾಲ ಸೆರೆವಾಸದಲ್ಲಿರಿಸಿ ಚಿಂತ್ರಹಿಂಸೆ ನೀಡಿದೆ. ತಮಗೆ ಜಾಮೀನು ನೀಡಲು ಬಾಂಬೆ ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಆರೋಪಿಗಳು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಇದರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಇವರ ಜಾಮೀನು ಅರ್ಜಿಗಳನ್ನು ಇನ್ನು ಒಂದು ತಿಂಗಳಿನಲ್ಲಿ ಇತ್ಯರ್ಥಪಡಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ತಾಕೀತು ಮಾಡಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT PSO BENGALURU-560 026 on 10/25 of every Month REG.NO.CPMG/KA/BGS/102/2015-17

15-5-2015



## ಸಮಾಜ ಭಾಂಧವರಲ್ಲಿ ಮನವಿ ಸಂಕಷ್ಟದಲ್ಲಿರುವ ನೇಪಾಳದ ಬಂಧುಗಳೊಂದಿಗೆ ಕೈಜೋಡಿಸಿ

ಏಪ್ರಿಲ್ 25ರಂದು ಸಂಭವಿಸಿದ ಭೀಕರ ಭೂಕಂಪದಿಂದ ನಲುಗಿರುವ ನೇಪಾಳದಲ್ಲಿ 80ಲಕ್ಷ ನಾಗರಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾವಿನ ಸಂಖ್ಯೆ ಈಗಾಗಲೇ 7 ಸಾವಿರದ ಗಡಿ ದಾಟಿದ್ದು, ಇದು 10 ಸಾವಿರ ದಾಟಬಹುದು ಎಂದು ಶಂಕಿಸಲಾಗಿದೆ. ಗಾಯಕ್ಕೆ ಉಪ್ಪು ಸವರಿದಂತೆ ನೇಪಾಳದಲ್ಲೆ ಮತ್ತೆ ಮತ್ತೆ ಭೂಮಿ ಕಂಪಿಸುತ್ತಿದ್ದು, ಕಳೆದ ಒಂದು ವಾರದಲ್ಲಿ ಒಟ್ಟು 121 ಬಾರಿ ನೇಪಾಳದಲ್ಲಿ ಭೂಮಿ ಕಂಪಿಸಿದೆ.

ನೇಪಾಳದ ಸಂತ್ರಸ್ತರ ನೆರವಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಧುಮುಕಿದ್ದು, ಈಗಾಗಲೇ 20,000ಕ್ಕೂ ಅಧಿಕ ಸ್ವಯಂಸೇವಕರು ನೇಪಾಳದ ಪರಿಹಾರ ಕಾರ್ಯಾಚರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸ್ವತಃ ಆರೆಸ್ಸೆಸ್‌ನ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ನೇಪಾಳಕ್ಕೆ ಭೇಟಿ ನೀಡಿ ಪರಿಹಾರ ಕಾರ್ಯಗಳನ್ನು ಖುದ್ದು ವೀಕ್ಷಿಸಿ, ಸ್ವಯಂಸೇವಕರಿಗೆ ಮಾರ್ಗದರ್ಶನ ಮಾಡಿದ್ದಾರೆ.

ಸಂಕಷ್ಟಕ್ಕೆ ಸಿಲುಕಿರುವ ನೇಪಾಳದ ಬಂಧುಗಳಿಗೆ ನೆರವಿನ ಹಸ್ತ ಚಾಚಲು 'ಆರೆಸ್ಸೆಸ್ ಸಂಚಾಲಿತ ಪರಿಹಾರ ನಿಧಿ'ಯ ಹೆಸರಿನಲ್ಲಿ ಪರಿಹಾರ ನಿಧಿ ಸಂಗ್ರಹಕ್ಕೆ ನಿರ್ಧರಿಸಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ - ಕರ್ನಾಟಕ
# 74, ಕೇಶವಕೃಪ, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು - 560 004
080-26610081 www.samvada.org, karnatakarss@gmail.com

### ಸಮಾಜ ಬಾಂಧವರಲ್ಲಿ ಒಂದು ಮನವಿ.

ಎಪ್ರಿಲ್ 27, 2015

ಎಪ್ರಿಲ್ 25, 2015 ರಂದು ಉಂಟಾದ ಭೀಕರ ಭೂಕಂಪಕ್ಕೆ ನೆರೆಯ ದೇಶ ನೇಪಾಳ ನಲುಗಿ ಹೋಗಿದೆ. ಸಾಂಸ್ಕೃತಿಕ ಶ್ರೀಮಂತಿಕೆಯ ನಾಡಾದ ನೇಪಾಳದ ಪ್ರಾಚೀನ ಸ್ಮಾರಕಳು, ದೇಗುಲಗಳು ಸೇರಿದಂತೆ ರಸ್ತೆ-ಶಾಲೆ-ಆಸ್ಪತ್ರೆ-ಅಂಗಡಿಗಳು ಧರಾಶಾಯಿಯಾಗಿವೆ. 3500ಕ್ಕೂ ಹೆಚ್ಚು ಮಂದಿ ಮೃತ ಪಟ್ಟಿದ್ದಾರೆ. ಸಹಸ್ರಾರು ಜನರು ಈ ಭೀಕರ ಭೂಕಂಪದಿಂದ ಸಂತ್ರಸ್ತರಾಗಿದ್ದಾರೆ.

ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿ-ಪಾಸ್ತಿ ನಷ್ಟವಾಗಿದೆ. ಭಾರತದ ಸರಕಾರ ಮತ್ತು ದೇಶದ ಜನತೆ ತಕ್ಷಣ ಸ್ಪಂದಿಸಿದೆ. ಆರೆಸ್ಸೆಸ್ ಸ್ವಯಂಸೇವಕರೂ ಈಗಾಗಲೇ ಪರಿಹಾರ ಕಾರ್ಯಾಚರಣೆಗೆ ಮುಂದಾಗಿದ್ದಾರೆ. ಸೇವಾಭಾರತಿ ಅಲ್ಲಲ್ಲಿ ಸಹಾಯಕೇಂದ್ರಗಳನ್ನು ಆರಂಭಿಸಿದೆ. ಸಾವಿರಾರು ನೊಂದ ಜೀವಗಳಿಗೆ ಆಸರೆಯಾಗಿದ್ದಾರೆ. ನೇಪಾಳದ ನಾಗರಿಕರ ಬದುಕು ದುಸ್ತರವಾಗಿದೆ. ಅಲ್ಲಿನ ಸಂತ್ರಸ್ತರಿಗೆ ಇದೀಗ ಮಾನವೀಯ ನೆರವು ಅವಶ್ಯವಿದ್ದು ಸಮಾಜ ಬಾಂಧವರೆಲ್ಲರೂ ಅಲ್ಲಿನ ಜನರ ಬದುಕನ್ನು ಮತ್ತೆ ಕಟ್ಟಿಕೊಡುವಲ್ಲಿ ಸಹಕರಿಸಬೇಕಿದೆ. ಆರ್ಥಿಕ ಧನಸಹಾಯವನ್ನು ದೇಣಿಗೆ ರೂಪದಲ್ಲಿ ನೀಡಿ ಸಹಕರಿಸಬೇಕು ಹಾಗೂ ನೇಪಾಳದ ಜನತೆಗೆದುರಾಗಿರುವ ಈ ಹಠಾತ್ ಸಂಕಷ್ಟವನ್ನು ನಿವಾರಿಸಲು ನಮ್ಮೊಂದಿಗೆ ಕೈ ಜೋಡಿಸಬೇಕೆಂದು ಕಳಕಳಿಯ ವಿಜ್ಞಾಪನೆಗಳು.



FOR ONLINE TRANSFER:
"RSS Sanchaalita Santrasta Parihaara Nidhi"
SB Account Number : 0789101009327,
IFSC Code: CNRB0000789 Canara Bank,
Kempegouda Nagar Branch,
(Near Chamarajapet Uma Theater)
Bangaluru -560018

**80 G** ವಿನಾಯಿತಿ ಇದೆ.

ಆರೆಸ್ಸೆಸ್ ಸಂಚಾಲಿತ ಸಂತ್ರಸ್ತ ಪರಿಹಾರನಿಧಿ
'RSS Sanchalita Santrasta Parihara Nidhi'
ಹೆಸರಿನಲ್ಲಿ ಚೆಕ್/ಡಿ.ಡಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ಕೋರುತ್ತೇವೆ

| "ಕೇಶವ ಕೃಪಾ" | "ಕೇಶವ ಕುಂಜ" |
| --- | --- |
| ಆರೆಸ್ಸೆಸ್ ಕಛೇರಿ | ಆರೆಸ್ಸೆಸ್ ಕಛೇರಿ |
| #74, ರಂಗರಾವ್ ರಸ್ತೆ | ಲೋಕಮಾನ್ಯ ತಿಲಕ್ ರಸ್ತೆ |
| ಶಂಕರಪುರಂ, ಬೆಂಗಳೂರು-560004 | ಗೋಕುಲ ರಸ್ತೆ, ಹುಬ್ಬಳ್ಳಿ |
| ದೂರವಾಣಿ:080-26610081 | ದೂರವಾಣಿ : 0836-2232972 |

ನಿಮ್ಮ ಉದಾರ ನೆರವಿನ ನಿರೀಕ್ಷೆಯಲ್ಲಿ
ವಿ. ನಾಗರಾಜ್
ಕ್ಷೇತ್ರೀಯ ಸಂಘಚಾಲಕರು, ಆರೆಸ್ಸೆಸ್

ನೀವು ಇಂಟರ್‌ನೆಟ್ ಮೂಲಕ ಅಥವಾ ಅಂಚೆ ಮೂಲಕ ಚೆಕ್/ಡಿಡಿ ಕಳುಹಿಸಿದರೆ ಆ ಕುರಿತು 9448284625, 9448847866 ಅಥವಾ karnatakarss@gmail.com ಗೆ ಇ-ಮೈಲ್ ಮೂಲಕ ದಯವಿಟ್ಟು ತಿಳಿಸಿ.

www.samvada.org

## 1000 ದಿನ ಪೂರೈಸಿದ 'ಭಾರತ ಪರಿಕ್ರಮ ಯಾತ್ರೆ'
### ಕೆದಿಲಾಯರಿಗೆ ಆರೆಸ್ಸೆಸ್ ಸರಸಂಘಚಾಲಕರ ಶುಭಹಾರೈಕೆ



ಗ್ರಾಮ ವಿಕಾಸದ ಧ್ಯೇಯದೊಂದಿಗೆ ಕಾಲ್ನಡಿಗೆಯ ಮೂಲಕ ದೇಶದಾದ್ಯಂತ ಸಂಚರಿಸುವ, ಆರೆಸ್ಸೆಸ್ ಮಾಜಿ ಅಖಿಲ ಭಾರತೀಯ ಸೇವಾ ಪ್ರಮುಖರಾಗಿದ್ದ ಸೀತಾರಾಮ ಕೆದಿಲಾಯ ನೇತೃತ್ವದ 'ಭಾರತ ಪರಿಕ್ರಮ ಯಾತ್ರೆ'ಯು ಇದೀಗ ಒಂದು ಸಾವಿರ ದಿನವನ್ನು ಪೂರೈಸಿದೆ. 67ರ ಹರೆಯದ ಸೀತಾರಾಮ ಕೆದಿಲಾಯರ ಈ ಯಾತ್ರೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಅಭಿನಂದಿಸಿದ್ದಾರೆ.

ಜಲ, ಮಣ್ಣು, ಗೋ ಸಂಪತ್ತಿನ ಸಂರಕ್ಷಣೆಯ ಗ್ರಾಮೀಣ ಜೀವನದ ಸೊಗಡಿನ ಅಗತ್ಯತೆಯನ್ನು ಸಾರುವ ಉದ್ದೇಶದಿಂದ 2012ರ ಆಗಸ್ಟ್ 9ರಂದು ಕನ್ಯಾಕುಮಾರಿಯಿಂದ ಆರಂಭಗೊಂಡ ಯಾತ್ರೆಯು ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಹರ್ಯಾಣ, ಜಮ್ಮು-ಕಾಶ್ಮೀರ ಸೇರಿದಂತೆ 14 ರಾಜ್ಯಗಳಲ್ಲಿ ಸಂಚರಿಸಿದೆ. 2015ರ ಮೇ 5ರಂದು ಅಸ್ಸಾಂನ ಗುವಾಹಟಿ ಬಳಿಯ ತೇಜಪುರಕ್ಕೆ ಪ್ರವೇಶಿಸುವ ಮೂಲಕ ಯಾತ್ರೆಯು ಸಾವಿರನೇ ದಿನವನ್ನು ಪೂರೈಸಿದೆ. ಯಾತ್ರೆಯ ಸಂದರ್ಭದಲ್ಲಿ ಊರಿನ ಪ್ರಮುಖರು, ವಿವಿಧ ಮತಗಳ ಪ್ರಮುಖರು, ಶಾಲಾ ವಿದ್ಯಾಥಿಗಳು, ಮೀನುಗಾರರು ಸೇರಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವವರನ್ನು ಭೇಟಿ ಮಾಡಿದ ಅವರು ಭಾರತೀಯ ಸಂಸ್ಕೃತಿ, ಸಂಸ್ಕಾರಗಳ ಕುರಿತು, ಕೃಷಿ ಸಂರಕ್ಷಣೆ, ಗೋ ಸಂರಕ್ಷಣೆ, ಗ್ರಾಮಜೀವನ ಸೇರಿದಂತೆ ಅನೇಕ ಗ್ರಾಮೀಣ ಸೊಗಡಿನ ಕುರಿತು ಮಾತುಕತೆ ನಡೆಸಿದ್ದಾರೆ. ಆರೆಸ್ಸೆಸ್‌ನ ಸರಸಂಘಚಾಲಕ ಮೋಹನ್ ಭಾಗವತ್ ಅವರು ಈ ಹಿಂದೆ 2013ರ ಜನವರಿಯಲ್ಲಿ ಮಹಾರಾಷ್ಟ್ರದ ಪನ್ವೇಲ್‌ನಲ್ಲಿ ಹಾಗೂ ಸೆಪ್ಟೆಂಬರ್ 8ರಂದು ರಾಜಸ್ಥಾನದ ಸೀಕರ್ ಜಿಲ್ಲೆಯಲ್ಲಿ ಸೀತಾರಾಮ ಕೆದಿಲಾಯ ಅವರನ್ನು ಭೇಟಿ ಮಾಡಿ ಶುಭ ಹಾರೈಸಿದ್ದರು.

## ಪುಲ್ಲೇಲ ಗೋಪಿಚಂದ್‌ಗೆ 'ಹಿಂದು ರತ್ನ' ಪ್ರಶಸ್ತಿ



ದೇಶದಾದ್ಯಂತ ಇರುವ ಹಿಂದುಗಳಿಗೆ ನೆರವಾಗುವ ದೃಷ್ಟಿಯಿಂದ ವಿಶ್ವ ಹಿಂದು ಪರಿಷತ್ ಆರಂಭಿಸಿರುವ 'ಹಿಂದು ಹೆಲ್ಪ್ ಲೈನ್'ನ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಖ್ಯಾತ ಬ್ಯಾಂಡ್ಮಿಂಟನ್ ಪಟು ಹಾಗೂ ರಾಷ್ಟ್ರೀಯ ಬ್ಯಾಡ್ಮಿಂಟನ್ ತರಬೇತುದಾರರಾದ ಪುಲ್ಲೇಲ ಗೋಪಿಚಂದ್, ಕೃಷಿಕ ಡಾ. ಆರ್. ಕೆ. ಪಾಠಕ್ ಹಾಗೂ ಡಾ. ರಾಮ್ ಅವರಿಗೆ 'ಹಿಂದು ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಹಿಂದು ಸಮಾಜಕ್ಕೆ ಗಮನಾರ್ಹ ಸೇವೆ ಸಲ್ಲಿಸಿದವರಿಗೆ, ರಾಷ್ಟ್ರಮಟ್ಟದ ಹಿರಿಮೆಯನ್ನು ಕಲೆ, ಸಂಸ್ಕೃತಿ, ವಿಜ್ಞಾನ, ಕೈಗಾರಿಕೆ, ಕ್ರೀಡೆ, ಅರ್ಥಕ್ಷೇತ್ರ, ಬುಡಕಟ್ಟು ಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ರಕ್ತ, ಆರೋಗ್ಯ, ಅಪಘಾತ, ಪ್ರಯಾಣ, ಪ್ರಾಕೃತಿಕ ದುರಂತಗಳು ಇತ್ಯಾದಿ ಸಂದರ್ಭದಲ್ಲಿ ನೆರವು ನೀಡಲು ಹಿಂದು ಹೆಲ್ಪ್‌ಲೈನ್ ಪ್ರಾರಂಭಿಸಲಾಗಿದ್ದು, ಈವರೆಗೆ 1.5 ಲಕ್ಷಕ್ಕೂ ಹೆಚ್ಚು ಮಂದಿಗೆ ನೆರವು ನೀಡಲಾಗಿದೆ ಎಂದು ವಿಶ್ವ ಹಿಂದು ಪರಿಷತ್‌ನ ಮುಖಂಡ ಪ್ರವೀಣ್ ತೋಗಾಡಿಯಾ ತಿಳಿಸಿದ್ದಾರೆ.

**ಹಿಂದು ಹೆಲ್ಪ್ ಲೈನ್‌ಗಾಗಿ ಸಂಪರ್ಕಿಸಿ: 020-66803300 ಮತ್ತು 07588682181**

## ಸಂಘ ಶಿಕ್ಷಾ ವರ್ಗ : ಕರ್ನಾಟಕದ ಒಟ್ಟು 1100 ಶಿಕ್ಷಾರ್ಥಿಗಳಿಗೆ ತರಬೇತಿ

ಸ್ವಯಂಸೇವಕರಲ್ಲಿ ಚಾರಿತ್ರ್ಯ ನಿರ್ಮಾಣ, ಬೌದ್ಧಿಕ ವಿಕಾಸ, ಕ್ರಿಯಾಶೀಲತೆ, ಕಾರ್ಯಕ್ಷಮತೆ ಹಾಗೂ ಶಾರೀರಿಕ ಸದೃಢತೆ ಮೂಡಿಸುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರತೀ ವರ್ಷ ನಡೆಸುವ 21 ದಿನಗಳ ಸಂಘ ಶಿಕ್ಷಾ ವರ್ಗಗಳು (ತರಬೇತಿ ಶಿಬಿರ) ಪ್ರಾರಂಭವಾಗಿವೆ.



ಕರ್ನಾಟಕ ದಕ್ಷಿಣ ಪ್ರಾಂತದ ಪ್ರಥಮ ವರ್ಷದ ಸಂಘ ಶಿಕ್ಷಾ ವರ್ಗ ಹಾಗೂ ಕರ್ನಾಟಕ ದಕ್ಷಿಣ ಮತ್ತು ಉತ್ತರ ಪ್ರಾಂತದ ದ್ವಿತೀಯ ವರ್ಷದ ಸಂಘ ಶಿಕ್ಷಾ ವರ್ಗವು ಬೆಂಗಳೂರಿನ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಏಪ್ರಿಲ್ 19ರಂದು ಆರಂಭಗೊಂಡಿದ್ದು ಮೇ 9ರಂದು ಮುಕ್ತಾಯಗೊಂಡಿದೆ. ದ್ವಿತೀಯ ವರ್ಷದ ಸಂಘ ಶಿಕ್ಷಾ ವರ್ಗದಲ್ಲಿ ಕರ್ನಾಟಕದ ಬೇರೆಬೇರೆ ಜಿಲ್ಲೆಗಳಿಂದ ಆಯ್ದ 148 ಮಂದಿ ಶಿಕ್ಷಾರ್ಥಿಗಳು ಭಾಗವಹಿಸಿದ್ದು ಪ್ರಥಮ ವರ್ಷದ ಸಂಘ ಶಿಕ್ಷಾ ವರ್ಗದಲ್ಲಿ 664 ಮಂದಿ ಭಾಗವಹಿಸಿದ್ದಾರೆ. ಧಾರವಾಡದ ಗರಗದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕರ್ನಾಟಕ ಉತ್ತರ ಪ್ರಾಂತದ ಪ್ರಥಮ ವರ್ಷದ ಸಂಘ ಶಿಕ್ಷಾ ವರ್ಗ ಏಪ್ರಿಲ್ 21ರಂದು ಆರಂಭಗೊಂಡಿದ್ದು ಮೇ 11ರಂದು ಮುಕ್ತಾಯಗೊಳ್ಳಲಿದೆ. ಶಿಬಿರದಲ್ಲಿ ಒಟ್ಟು 260 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಇದೇ ಕೇಂದ್ರದಲ್ಲಿ ಎರಡೂ ಪ್ರಾಂತದ ವಿಶೇಷ ಸಂಘ ಶಿಕ್ಷಾ ವರ್ಗ (ವಯೋಮಿತಿ 40ಕ್ಕಿಂತ ಅಧಿಕ) ನಡೆಯುತ್ತಿದ್ದು ಒಟ್ಟು 45 ಮಂದಿ ತರಬೇತಿ ಪಡೆಯುತ್ತಿದ್ದಾರೆ. ಈ ಮೂಲಕ ಈ ವರ್ಷ ಪ್ರಥಮ, ದ್ವಿತಿಯ ಹಾಗೂ ವಿಶೇಷ ಶಿಬಿರ ಸೇರಿದಂತೆ ಕರ್ನಾಟಕದ ಒಟ್ಟು 1117 ಮಂದಿ ಶಿಕ್ಷಾರ್ಥಿಗಳು ಶಿಬಿರದ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಶಿಬಿರಕ್ಕೆ ಸರಸಂಘಚಾಲಕ ಮೋಹನ್ ಭಾಗವತ್, ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೇಂಡೆ, ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಮುಕುಂದ್, ಅಖಿಲ ಭಾರತೀಯ ಸಹ ಸಂಪರ್ಕ ಪ್ರಮುಖ್ ಅನಿರುದ್ಧ ದೇಶಪಾಂಡೆ ಸೇರಿದಂತೆ ಅನೇಕ ಸಂಘದ ಅಧಿಕಾರಿಗಳು ಭೇಟಿ ನೀಡಿ ಮಾರ್ಗದರ್ಶನ ಮಾಡಿದ್ದಾರೆ.

## ರಾಷ್ಟ್ರ ಸೇವಿಕಾ ಸಮಿತಿ : 177 ಶಿಕ್ಷಾರ್ಥಿಗಳಿಗೆ ತರಬೇತಿ




ಮಹಿಳೆಯರನ್ನು ಸಂಘಟಿಸುತ್ತಿರುವ ರಾಷ್ಟ್ರ ಸೇವಿಕಾ ಸಮಿತಿಯ 15 ದಿನಗಳ ತರಬೇತಿ ಶಿಬಿರವು ಏಪ್ರಿಲ್ 19ರಿಂದ ಮೇ 3ರ ತನಕ ಚಿತ್ರದುರ್ಗದ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ನಡೆಯಿತು. ಒಟ್ಟು 177 ಶಿಕ್ಷಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು. ರಾಷ್ಟ್ರ ಸೇವಿಕಾ ಸಮಿತಿಯ ವಿಶ್ವ ವಿಭಾಗ ಪ್ರಮುಖರಾದ ಅಲಕಾ ಇನಾಮ್‌ದಾರ್ ಮುಂತಾದ ಹಿರಿಯರು ಆಗಮಿಸಿ ಮಾರ್ಗದರ್ಶನ ಮಾಡಿದರು.

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19